ನೀರು ಹರಿಸುವ ಕಾರ್ಯಕ್ರಮವಿದೆ.

ಅಂಬ್ಲಿಗೊಳ ಜಲಾಶಯದ ಕಾಮಗಾರಿ ಮಂಜೂರಾತಿ

1404 (1723) ಶ್ರೀ ಬಿ.ಎನ್.ಮಹಾಲಿಂಗಪ್ಪ (ಶಿಕಾರಿಪುರ): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಂಬ್ಲಿಗೊಳ ಜಲಾಶಯದ ಚಾನಲ್ ಲೈನಿಂಗ್ ಬಗ್ಗೆ ಮಂಜೂರಾದ ಹಣ ಎಷ್ಟು?

ಆ) ಕಾಮಗಾರಿ ಕೆಲಸ ಎಷ್ಟು ಆಗಿದೆ?

ಇ) ಎಷ್ಟು ಹಣ ಉಳಿದಿದೆ?

ಈ) ಈ ಕೆಲಸ ಪೂರ್ಣಗೊಳ್ಳದಿರಲು ಕಾರಣ ಏನು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಅಂಬ್ಲಿಗೊಳ ಜಲಾಶಯದ ಏರಿ ಮತ್ತು ಕೋಡಿ ಎತ್ತರಿಸುವ ಕಾಮಗಾರಿಯ ಅಂದಾಜು ಪಟ್ಟಿಯು ರೂ.178.00 ಲಕ್ಷಗಳಿಗೆ ಮಂಜೂರಾಗಿರುತ್ತದೆ. ಅದರಲ್ಲಿ ಅಂಬ್ಲಿಗೊಳ ಎಡನಾಲೆಯ ಅಭಿವೃದ್ಧಿ ಮತ್ತು 2.40 ಕಿ.ಮೀ. ಉದ್ದ ಕಾಲುವೆ ಲೈನಿಂಗ್‌ಗೆ ರೂ.63.99 ಲಕ್ಷಗಳು ಮಂಜೂರಾಗಿರುತ್ತದೆ.

ಆ) ಎಡದಂಡೆ ಕಾಲುವೆಯ 2.40 ಕಿ.ಮಿ. ರೈನಿಂಗ್ ಕೆಲಸದಲ್ಲಿ 1.00 ಕಿ.ಮೀ. ಉದ್ದದ ಕಾಲುವೆ ಲೈನಿಂಗ್ ಕೆಲಸವು ಪೂರ್ಣಗೊಂಡಿದೆ.

ಇ) ಕಾಲುವೆ ಲೈನಿಂಗ್ ಕೆಲಸ ಸಂಬಂಧ ರೂ.38.00 ಲಕ್ಷ ಗಳ ಕೆಲಸ ಬಾಕಿ ಉಳಿದಿದೆ

ಈ) ಈ ಕಾಮಗಾರಿಗೆ 2000-01 ರಿಂದ ಈವರೆಗೆ ಲೆಕ್ಕ ಶೀರ್ಷಿಕೆ 4701 ಅಡಿಯಲ್ಲಿ ಅನುದಾನ ಒದಗಿಸಿರುವುದಿಲ್ಲ. ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ಸಂಸ್ಥೆಗೆ ಈ ಕಾಮಗಾರಿಯನ್ನು ವಹಿಸಿದ್ದು, ಸಂಸ್ಥೆಯನ್ನು ಮುಚ್ಚುದಂತೆ ಸರ್ಕಾರವು ನಿರ್ಧಾರ ಕೈಗೊಂಡಿರುವ ಹಿನ್ನಲೆಯಲ್ಲಿ ಈ ಕಾಮಗಾರಿಯನ್ನು ಪೂರ್ಣಗೊಳಿಸಿರುವುದಿಲ್ಲ.

ಕಪ್ಪನಹಳ್ಳಿ ಕಾಲು ಸೇತುವೆ ಬಗ್ಗೆ

1406 (1725) ಶ್ರೀ ಮಹಾಲಿಂಗಪ್ಪ .ಬಿ.ಎನ್ (ಶಿಕಾರಿಪುರ): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಪ್ಪನಹಳ್ಳಿ ಕಾಲು ಸೇತುವೆ ಕಾಮಗಾರಿ ಮಂಜೂರಾಗಿದೆಯೆ

ಆ) ಮಂಜೂರಾಗಿದ್ದಲ್ಲಿ ಎಂದಿನಿಂದ ಕೆಲಸ ಪ್ರಾರಂಭಿಸಲಾಗುವುದು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಉದ್ಭವಿಸುವುದಿಲ್ಲ.

ಬಿಜಾಪುರ ಕೃಷಿ ಮಹಾ ವಿದ್ಯಾಲಯಕ್ಕೆ ಕಟ್ಟಡ ನಿರ್ಮಿಸಲು ಅನುದಾನ

1407 (1707) ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಿಜಾಪುರದಲ್ಲಿ ಕೃಷಿ ಮಹಾವಿದ್ಯಾಲಯ ಇರುವ ವಿಷಯ ಸರ್ಕಾರಕ್ಕೆ ಗೊತ್ತಿದೆಯೇ ;

ಆ) ಹಾಗಿದ್ದರೆ, ಈ ಮಹಾವಿದ್ಯಾಲಯಕ್ಕೆ ಇಲ್ಲಿಯವರೆಗೂ ಮುಖ್ಯ ಕಟ್ಟಡ ಇಲ್ಲದಿರುವುದರ ಬಗ್ಗೆ ಹಾಗೂ ಕೆಲವು ಕಟ್ಟಡಗಳ ಕಾಮಗಾರಿ ಅರ್ಧಕ್ಕೆ ನಿಂತಿರುವ ಬಗ್ಗೆ ಸರ್ಕಾರ ಗಮನ

ಹರಿಸಿದೆಯೇ ;

ಇ) ಈ ಮಹಾವಿದ್ಯಾಲಯದ ಮುಖ್ಯ ಕಟ್ಟಡ ನಿರ್ಮಾಣದ ಹಾಗೂ ಅರ್ಧಕ್ಕೆ ನಿಂತ ಕಟ್ಟಡಗಳ ಪೂರ್ಣಗೊಳಿಸುವ ಬಗ್ಗೆ ಅಂದಾಜು ಪಟ್ಟಿಯನ್ನೊಳಗೊಂಡಂತೆ ಪ್ರಸ್ತಾವನೆಯು ಸರ್ಕಾರದ ಮುಂದೆ ಬಂದಿದೆಯೆ. ಬಂದಿದ್ದರೆ ಈ ಬಗ್ಗೆ ಕೈಗೊಂಡ ಕ್ರಮಗಳೇನು ;

ಈ) ಈ ಕೆಲಸಕ್ಕಾಗಿ ಅಗತ್ಯವಿರುವ ಅಂದಾಜು ಖರ್ಚು ವೆಚ್ಚ ಎಷ್ಟು ;

ಉ) ಸರಕಾರವು ಈ ಹಿಂದೆ ಏನಾದರೂ ಹಣ ಒದಗಿಸಿದ್ದರೆ ಯಾವ ವರ್ಷ ಎಷ್ಟು ಹಣ ಒದಗಿಸಿದೆ ;

ಊ) ಈ ಹಿಂದೆ ಆಯವ್ಯಯದಲ್ಲಿ ಹಣ ಮೀಸಲಿರಿಸಿ ಕಟ್ಟಡ ಕೆಲಸ ಪೂರ್ಣಗೊಳಿಸುವುದಾಗಿ ತಿಳಿಸಿದ್ದು, ಈ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು) :

ಅ) ಹೌದು.

ಆ) ಹೌದು.

ಇ) 2002-03ನೇ ಸಾಲಿನ ಆಯವ್ಯಯದಲ್ಲಿ ರೂ. 100 ಲಕ್ಷಗಳನ್ನು ಒದಗಿಸಲಾಗಿದೆ. ಇದರಲ್ಲಿ ಈಗಾಗಲೇ 30 ಲಕ್ಷಗಳನ್ನು ಬಿಡುಗಡೆ ಮಾಡಿದೆ.

ಈ) ರೂ. 5.34 ಕೋಟಿಗಳು.

ಉ) 2002-03ರ ಆಯವ್ಯಯದಲ್ಲಿ ಒಂದು ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ.

ಊ) ಉದ್ಭವಿಸುವುದಿಲ್ಲ.

ರೈತರಿಗೆ ಬೆಳೆ ವಿಮೆ ಹಣ ಬಿಡುಗಡೆ

1408 (1713) ಶ್ರೀ ಪಾಟೀಲ ಶಿವಾನಂದ ಸಿದ್ದರಾಮಗೌಡ (ತಿಕೋಟ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ರೈತರಿಗಾಗಿ ಬೆಳೆ ವಿಮೆ ಯೋಜನೆ ಜಾರಿಯಲ್ಲಿದೆಯೇ ; ಯಾವ ವರ್ಷದಿಂದ ಈ ಯೋಜನೆ ಜಾರಿಗೆ ಬಂದಿದೆ ;

ಆ) ರಾಜ್ಯದಲ್ಲಿ ಎಷ್ಟು ಜನರು ಬೆಳೆ ವಿಮೆ ಯೋಜನೆಗೆ ಒಳಗಾಗಿದ್ದಾರೆ ;

ಇ) ಯಾವ ಯಾವ ಬೆಳೆಗಳಿಗೆ ಬೆಳೆ ವಿಮೆ ನೀಡಲಾಗುವುದು ;

ಈ) ಈ ಯೋಜನೆಯಲ್ಲಿ ಕೇಂದ್ರ ಸರಕಾರವು ಪಾವತಿಸಬೇಕಾದ ಹಣ ಎಷ್ಟು ; ರಾಜ್ಯ ಸರಕಾರ ಪಾವತಿ ಬೇಕಾದ ವಿಮೆ ಹಣ ಎಷ್ಟು ?

ಉ) ಇದುವರೆಗೂ ರಾಜ್ಯದ ಎಷ್ಟು ರೈತರಿಗೆ ವಿಮೆ ಹಣ ಪಾವತಿ ಮಾಡಲಾಗಿದೆ ? ಬಾಕಿ ಉಳಿದ ಹಣ ಎಷ್ಟು ? ಉಳಿದ ಹಣವನ್ನು ಯಾವಾಗ ಪಾವತಿ ಮಾಡಲಾಗುವುದು ;

ಊ) ತೋಟಗಾರಿಕಾ ಬೆಳೆಗಳಿಗೂ ಸಹ ವಿಮೆ ಯೋಜನೆ ಅನ್ವಯಿಸುವುದೆ ; ಅನ್ವಯಿಸದಿದ್ದಲ್ಲಿ ಅನ್ವಯವಾಗುವ ರೀತಿಯಲ್ಲಿ ಸರ್ಕಾರ ಏನು ಕ್ರಮ ಕೈಗೊಳ್ಳುವುದು ?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು) :

ಅ) ರಾಜ್ಯದಲ್ಲಿ ರೈತರಿಗಾಗಿ ಬೆಳೆ ವಿಮಾ ಯೋಜನೆ ಜಾರಿಯಲ್ಲಿದೆ. ರಾಜ್ಯದಲ್ಲಿ 1985 ರಿಂದ ವ್ಯಾಪಕ ಬೆಳೆ ವಿಮಾ ಯೋಜನೆಯು ಜಾರಿಯಲ್ಲಿತ್ತು. 1999ರ ಮುಂಗಾರು ಹಂಗಾಮಿನವರೆಗೂ ಇದು ಮುಂದುವರಿದಿತ್ತು. ಮುಂಗಾರು 2000 ದಿಂದ ಹೊಸ ಬೆಳೆ ವಿಮಾ ಯೋಜನೆಯಾದ ರಾಷ್ಟ್ರೀಯ ಕೃಷಿ ವಿಮಾ ಯೋಜನೆಯನ್ನು ರಾಜ್ಯದಲ್ಲಿ (ಅನುಷ್ಠಾನಗೊಳಿಸಲಾಗಿದೆ)